**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಜೇವರ್ಗಿ**

**ಸಿ.ಸಿ.ನಂಃ 391/2022**

| | |
|---|---|
| ಪಿರ್ಯಾದಿದಾರಃ | ಕರ್ನಾಟಕ ರಾಜ್ಯದ ಪರ ಜೇವರ್ಗಿ ಪೋಲಿಸ ಠಾಣೆ |
| | **ವಿರುದ್ಧ** |
| ಆರೋಪಿ | ಚಂದಾಪಾಷಾ ಯಾಳವಾರ, ಕಿರಿಯ ಆರೋಗ್ಯ ಸಹಾಯಕ, (ಸರಕಾರಿ ನೌಕರ), ಆರೋಗ್ಯ ಉಪ ಕೇಂದ್ರ ಯಾಳವಾರ, ವಾಸಃ ಗಂವಾರ, ತಾಃ ಜೇವರ್ಗಿ,ಜಿಃ ಕಲ್ಬುರ್ಗಿ. |

## ದೋಷಾರೋಪಣೆ

ಸಂದೀಪ್.ಎ.ನಾಯಿಕ್ ಬಿ.ಎ., ಎಲ್‌ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳಾದ ನಾನು, ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ

ದಿನಾಂಕ 16-04-2021 ರಂದು ಮಧ್ಯಾಹ್ನ 12-47 ಗಂಟೆ ಸಮಯದಲ್ಲಿ ಆರೋಪಿಯಾದ ನೀವು ಸಹಾಯಕ ಆರೋಗ್ಯ ಸಹಾಯಕನಾಗಿ ಯಾಳವಾರ ಗ್ರಾಮದ ಆರೋಗ್ಯ ಉಪಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಚಾಸಾ-1 ರವರು ಆರೋಗ್ಯ ಇಲಾಖೆಯ ಮೇಲಾಧಿಕಾರಿಗಳಿಗೆ ನಿಮ್ಮ ಮೇಲೆ ದೂರು ನೀಡಿದ ವಿಷಯವಾಗಿ ಆರೋಪಿಯಾದ ನೀವು ಚಾಸಾ-1 ರವರ ಮೊಬೈಲಿಗೆ ಕರೆ ಮಾಡಿ ಮಗನೇ ನನ್ನ ವಿರುದ್ಧ ಮೇಲಾಧಿಕಾರಿಗಳಿಗೆ ದೂರು ಕೊಡ್ತಿಯಾ ನಿನ್ನಂಥವರನ್ನು ನಾನು ಬಹಳ ಜನರನ್ನು ನೋಡಿದ್ದೀನಿ ನೀನು ಈಗ ಎಲ್ಲಿದ್ದೀಯಾ ಹೇಳು ಅಲ್ಲಿಗೆ ಬಂದು ನಿನ್ನ ತಿಂಡಿ ನೋಡ್ತೀನಿ ಇಂಥವೆಲ್ಲಾ ನನ್ನ ಬಳಿ ನಡೆಯುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಚಾಸಾ-1 ರವರಿಗೆ ಅವಮಾನವನ್ನುಂಟು ಮಾಡಿ ಚಾಸಾ-1 ರವರು ಸಮಾಜದ ಶಾಂತಿಯನ್ನು ಕೆಡಿಸುವಂತೆ ಚಾಸಾ-1 ರವರನ್ನು ಉದ್ರೇಕಿಸಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 504 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು, ಮೇಲೆ ಹೇಳಿದ ವಿಚಾರವಾಗಿ ಆರೋಪಿಯಾದ ನೀವು ಚಾಸಾ-1 ರವರಿಗೆ ಜೀವದ ಬೆದರಿಕೆ ಹಾಕಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 506 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೇಲ್ಕಂಡ ಆಪಾದನೆಗೆ ಆರೋಪಿಗಳಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

ಸ್ಥಳಃ ಜೇವರ್ಗಿ (ಸಂದೀಪ್.ಎ.ನಾಯಿಕ್)

ದಿಃ 19-02-2024 ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

ಜೇವರ್ಗಿ

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ, ಜೇವರ್ಗಿ**

**ಸಿ.ಸಿ.ನಂಃ 391/2022**

| | |
|---|---|
| ಪಿರ್ಯಾದುದಾರಃ | ಕರ್ನಾಟಕ ರಾಜ್ಯದ ಪರ ಜೇವರ್ಗಿ ಪೊಲೀಸ ಠಾಣೆ |
| | **ವಿರುದ್ಧ** |
| ಆರೋಪಿ | ಚಂದಾಪಾಷಾ ಯಾಳವಾರ, ಕಿರಿಯ ಆರೋಗ್ಯ ಸಹಾಯಕ, (ಸರಕಾರಿ ನೌಕರ), ಆರೋಗ್ಯ ಉಪ ಕೇಂದ್ರ ಯಾಳವಾರ, ವಾಸಃ ಗಂವಾರ, ತಾಃ ಜೇವರ್ಗಿ,ಜಿಃ ಕಲ್ಬುರ್ಗಿ. |

**ದೋಷಾರೋಪಣೆ**

ಪ್ರಶ್ನೆ1:– ಮೇಲ್ಕಂಡ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?
ಉತ್ತರ:–

ಪ್ರಶ್ನೆ2:– ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ
ವಿಚಾರಣೆಯಾಗಬೇಕೋ?

ಉತ್ತರ:–

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿಯ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

ಸ್ಥಳಃಜೇವರ್ಗಿ (ಸಂದೀಪ್.ಎ.ನಾಯಿಕ್)
ದಿನಾಂಕ: 19–02–2024 ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ.